ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಸಿ.ಎಂ. ಅಅಮುಲ್ಲಖಾನ್ ಮತ್ತು ಮತ್ತೊಬ್ಬರು -ವಿರುದ್ಧ ಕರ್ನಾಟಕ ರಾಜ್ಯ, ಗಾಂಧಿ ಗುಂಜ್ ಪಿ.ಎಸ್., ಬೀದರ್ ಮತ್ತು ಮತ್ತೊಬ್ಬರು*

ಕ್ರಿಮಿನಲ್ ಅರ್ಜಿಸಂಖ್ಯೆ: 201319/2019, ದಿನಾಂಕ 18 ನೇ ಫೆಬ್ರುವರಿ, 2020.

ಆಜ್ಞೆ

ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ:

ಪ್ರಾಸಿಕ್ಯೂಷನ್ನ ವಾದದ ಸಾರಾಂಶವೇನೆಂದರೆ, ದೂರುದಾರನಾಗಿರುವ ಎರಡನೇ ಎದುರುದಾರನು, ಈ ರಾಜ್ಯದ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ " ಸಲರ್ " ಹೆಸರಿನ ಉರ್ದು ವೃತ್ತಪತ್ರಿಕೆಯಲ್ಲಿ ಮಾನನಷ್ಟಕರ ಲೇಖನವನ್ನು ಪ್ರಕಟಿಸುವ ಮೂಲಕ ಆಪಾದಿತನು ತನ್ನ ಹೆಸರನ್ನು ಕೆಡಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆ, 1860 ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ ' ಭಾದಂಸಂ ' ಎಂದು ಉಲ್ಲೇಖಿಸಲಾಗಿದೆ) 500 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವೆಸಗಿರುವನೆಂದು ಆಪಾದಿಸಿ, ಬೀದರ್ನಲ್ಲಿರುವ ಮಾನ್ಯ I ನೇ ಹೆಚ್ಚುವರಿ ಜೆಎಂಎಫ್ಸಿ (II) ನ್ಯಾಯಾಲಯದಲ್ಲಿ ಪಿ.ಸಿ.ನಂ .109/2014 ರಲ್ಲಿ 1 ನೇ ಹಾಗೂ 2 ನೇ ಆಪಾದಿತರೆಂದು ಅವರನ್ನು ಆಪಾದಿಸಿ ಪ್ರಸ್ತುತ ಅರ್ಜಿದಾರರ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆ, 1973 ರ 200 ನೇ ಪ್ರಕರಣದ ಮೇರೆಗೆ ಖಾಸಗಿ ದೂರನ್ನು ದಾಖಲಿಸಲಾಗಿದೆ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ದೂರುದಾರನು ಸಿಡಬ್ಲ್ಯೂ -1 ಎಂದು ಸ್ವತಃ ವಿಚಾರಣೆಗೆ ಒಳಗಾಗಿದ್ದಾನೆ ಮತ್ತು ಅವನ ಕಡೆಯಿಂದ ಪ್ರಾ.ಸಾ.- 2 ಎಂದು ಮತ್ತೊಬ್ಬರನ್ನು ವಿಚಾರಣೆ ಮಾಡಲಾಗಿದ್ದು ನಿಶಾನೆ ಸಿ 1, ಸಿ 1 ( ಎ), ಸಿ 2 ಹಾಗೂ ಪಿ 2 ( ಎ) ಎಂದು ದಸ್ತಾವೇಜುಗಳನ್ನು ಗುರುತು ಹಾಕಲಾಗಿದೆ.ಅಧಿವಿಚಾರಣಾ ನ್ಯಾಯಾಲಯವು,ದಿನಾಂಕ: 28.04.2016 ರ ತನ್ನ ಆದೇಶದ ಮೂಲಕ, ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡಿದೆ ಹಾಗೂ ಆಪಾದಿತ ಅಪರಾಧಕ್ಕಾಗಿ ಆಪಾದಿತನಿಗೆ ಆದೇಶಿಕೆಯನ್ನು ಹೊರಡಿಸಿದೆ.ಆಪಾದಿತನು ಅಧಿವಿಚಾರಣಾ ನ್ಯಾಯಾಲಯದಲ್ಲಿ, ವಿಚಾರಣಾ ನ್ಯಾಯಾಲಯದ ಇಡೀ ವ್ಯವಹರಣೆಯನ್ನು ರದ್ದುಗೊಳಿಸುವಂತೆ ಕೋರಿ, ಈ ಅರ್ಜಿಯಲ್ಲಿ ಪ್ರಶ್ನಿಸಿರುವನು ಎಂಬುದು ಸದರಿ ಆದೇಶವಾಗಿದೆ.

2. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ತಮ್ಮ ವಾದದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಮೇರೆಗೆ ವಿಚಾರಣಾ ನ್ಯಾಯಾಲಯದಲ್ಲಿ ದೂರುದಾರನು ಸಲ್ಲಿಸಿದ ಖಾಸಗಿ ದೂರಿನೊಂದಿಗೆ ಅಫಿಡವಿಟ್ ಇರುವುದಿಲ್ಲ.ಹಾಗೆಯೇ, ವರದಿಯಾದ ಪ್ರಿಯಾಂಕ ಶ್ರೀವಾತ್ಸವ ಹಾಗೂ ಮತ್ತೊಬ್ಬರು -ವಿರುದ್ಧ-ಉತ್ತರ ಪ್ರದೇಶ ರಾಜ್ಯ ಹಾಗೂ ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ದೂರನ್ನು ಚ ಸಮರ್ಥಿಸಲಾಗುವುದಿಲ್ಲ.ಹಾಗಾಗಿ ಇದು ರದ್ದುಗೊಳಿಸಲು ತಕ್ಕುದಾಗಿರುತ್ತದೆ ಎಂಬ ಒಂದೇ ಒಂದು ಅಂಶದ ಮೇಲೆ ಮಾತ್ರ ಕೋರಲಾಗಿದೆ.

3. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು, ತಮ್ಮ ವಾದದಲ್ಲಿ ಪ್ರಕರಣದ ಸನ್ನಿವೇಶಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಮೇರೆಗೆ ದೂರಿನೊಂದಿಗೆ ದೂರುದಾರನು ಅಂಥ ಅಫಿಡವಿಟ್ಟನ್ನು ಸಲ್ಲಿಸುವುದು ಅಗತ್ಯವಿಲ್ಲ ಎಂದು ನಿವೇದಿಸಿದ್ದಾರೆ.

4. ದೂರುದಾರನಾಗಿರುವ ಎರಡನೇ ಎದುರುದಾರನಿಗೆ ನೋಟೀಸನ್ನು ಹೊರಡಿಸಿದ್ದರೂ ಗೈರು ಹಾಜರಾಗಿದ್ದಾನೆ.

ಒಪ್ಪಿಕೊಂಡಿರುವಂತೆ, ದೂರುದಾರನ/ 2 ನೇ ಎದುರುದಾರನು ಸಲ್ಲಿಸಿದ ಖಾಸಗಿ ದೂರು ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿದೆ ಹಾಗೂ ಇದರೊಂದಿಗೆ ಯಾವುದೇ ಅಫಿಡವಿಟ್ ಇರುವುದಿಲ್ಲ.ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಿಯಾಂಕ ಶ್ರೀವಾತ್ಸವ ಮೊಕದ್ದಮೆಯ (ಮೇಲಿನ) ತೀರ್ಪಿನಲ್ಲಿನ 29, 30 ಹಾಗೂ 31 ನೇ ಕಂಡಿಕೆಯ ಕಡೆ ಈ ನ್ಯಾಯಾಲಯದ ಗಮನ ಸೆಳೆದಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"29. ಈ ಹಂತದಲ್ಲಿ, 156 (3) ನೇ ಪ್ರಕರಣದ ಮೇರೆಗಿನ ಅಧಿಕಾರವು, ನ್ಯಾಯಿಕ ವಿವೇಚನೆಯನ್ನು ಅನ್ವಯಿಸುವುದನ್ನು ಸಮರ್ಥಿಸುತ್ತದೆಂದೆ ಹೇಳುವಂತೆ ತೋರುತ್ತದೆ.ವಿಚಾರಣಾ ನ್ಯಾಯಾಲಯವು ಒಳಗೊಳ್ಳುತ್ತದೆ.ಸಂಹಿತೆಯ 154 ನೇ ಪ್ರಕರಣದ ಹಂತದಲ್ಲಿ ಪೊಲೀಸರು ಕ್ರಮ ಕೈಗೊಳ್ಳಲಾಗುವುದಿಲ್ಲ.ವ್ಯಾಜ್ಯಕಾರನು ತನ್ನ ವಿಲಕ್ಷಣ ಬುದ್ಧಿಯಿಂದ ದಂಡಾಧಿಕಾರಿಯ ಅಧಿಕಾರವನ್ನು ಕೋರಲಾಗುವುದಿಲ್ಲ.ಶುದ್ಧಹಸ್ತದಿಂದಿರುವ ತತ್ವಬದ್ಧ ಹಾಗೂ ನಿಜವಾಗಿಯೂ ನೊಂದ ನಾಗರಿಕರಿಗೆ ಸದರಿ ಅಧಿಕಾರವನ್ನು ಕೋರುವ ಮುಕ್ತ ಅವಕಾಶವಿರಬೇಕು.ಇದು ನಾಗರಿಕರನ್ನು ರಕ್ಷಿಸುತ್ತದಾದರೂ, ಸಹನಾಗರಿಕರಿಗೆ ಕಿರುಕುಳ ನೀಡಲು ವಿಕಾರ ವ್ಯಾಜ್ಯಗಳ ಈ ಮಾರ್ಗವನ್ನು ಅನುಸರಿಸಿದಾಗ, ಇದನ್ನು ತಡೆಯಲು ಹಾಗೂ ನಿಗ್ರಹಿಸಲು ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

30. ನಮ್ಮ ವಿಚಾರಪರ ಅಭಿಪ್ರಾಯದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ನೇ ಪ್ರಕರಣದ ಮೇರೆಗೆ, ದಂಡಾಧಿಕಾರಿಯವರ ಅಧಿಕಾರವ್ಯಾಪ್ತಿಯನ್ನು ಅನ್ವಯಿಸುವುದನ್ನು ಕೋರುವ ಅರ್ಜಿದಾರನು ಯುಕ್ತವಾಗಿ ಪ್ರಮಾಣ ಮಾಡಿದ ಅಫಿಡವಿಟ್ಟಿನ ಮೂಲಕ ಅರ್ಜಿಗಳನ್ನು ಸಮರ್ಥಿಸಬೇಕಾಗಿರುವ ಹಂತ ಈ ರಾಷ್ಟ್ರದಲ್ಲಿ ಬ ಂ ದಿದೆ. ಅದಲ್ಲದೆ, ಸೂಕ್ತ ಮೊಕದ್ದಮೆಯಲ್ಲಿ ಮಾನ್ಯ ದಂಡಾಧಿಕಾರಿಯವರು, ಸತ್ಯ ಪರಿಶೋಧನೆ ಮಾಡಲು ಉತ್ತಮ ಸಲಹೆಯನ್ನು ನೀಡಿದ್ದು, ಹಾಗೆಯೇ ಆಪಾದನೆಗಳ ಸತ್ಯತೆಯನ್ನು ಸಹ ಪರಿಶೀಲಿಸಬಹುದಾಗಿದೆ.ಈ ಅಫಿಡವಿಟ್ಟು ಅರ್ಜಿದಾರನನ್ನು ಹೆಚ್ಚು ಹೊಣೆಗಾರನನ್ನಾಗಿ ಮಾಡಬಹುದು.ಕೆಲವು ವ್ಯಕ್ತಿಗಳಿಗೆ ಚ ಕಿರುಕುಳ ನೀಡಲು ಮಾತ್ರ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ವಾಡಿಕೆಯಂತೆ ಅಂತಹ ರೀತಿಯ ಅರ್ಜಿಗಳನ್ನು ಸಲ್ಲಿಸುತ್ತಿರುವುದರಿಂದ ನಾವು ಹಾಗೆ ಹೇಳುವುದು ಅನಿವಾರ್ಯವಾಗಿದೆ.ಅದನ್ನು ಹೊರತುಪಡಿಸಿದಂತೆ, ಸದರಿ ಅಧಿನಿಯಮದ ಚೌಕಟ್ಟಿನಲ್ಲಿ ಅಥವಾ ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿ ಪ್ರಶ್ನಿಸಬಹುದಾಗಿರುವ ಶಾಸನಬದ್ಧ ಉಪಬಂಧದ ಅಡಿಯಲ್ಲಿ ಆದೇಶಗಳನ್ನು ಹೊರಡಿಸುತ್ತಿರುವ ಜನರನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಇದು ಹೆಚ್ಚು ಗೊ ಂ ದಲಮಯ ಹಾಗೂ ಎಚ್ಚರಿಕೆಯ ಗ ಂ ಟೆಯಾಗಿ ಪರಿಣಮಿಸುತ್ತದೆ.ಆದರೆ, ಯಾರೋ ಒಬ್ಬರ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಪಡಿಸಲು ನಿರ್ಧರಿಸಿದ್ದರೆ ಹೇಗೋ ಹಾಗೆ ಕ್ರಿಮಿನಲ್ ನ್ಯಾಯಾಲಯದಲ್ಲಿ ಅನಗತ್ಯ ಲಾಭ ಪಡೆಯಲು ಇದನ್ನು ಮಾಡಲಾಗುವುದಿಲ್ಲ.

31. 156 ( 3) ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವಾಗ, 154 ( 1) ಹಾಗೂ 154 ( 3) ನೇ ಪ್ರಕರಣಗಳ ಮೇರೆಗೆ ಮೊದಲೇ ಅರ್ಜಿಗಳನ್ನು ಸಲ್ಲಿಸಿರಬೇಕಾಗುತ್ತದೆಂದು ನಾವು ಈಗಾಗಲೇ ಸೂಚಿಸಿದ್ದೇವೆ.ಎರಡೂ ಅಂಶಗಳನ್ನು, ಅರ್ಜಿಯಲ್ಲಿ ಸ್ಪಷ್ಟವಾಗಿ ತಿಳಿಸಬೇಕು ಹಾಗೂ ಆ ರೀತಿಯ ಅಗತ್ಯ ದಸ್ತಾವೇಜುಗಳನ್ನು ಸಲ್ಲಿಸತಕ್ಕದ್ದು.156 ನೇ ಪ್ರಕರಣದ ಮೇರೆಗಿನ ಅರ್ಜಿಯನ್ನು ಅಫಿಡವಿಟ್ಟಿನ ಮೂಲಕ ಸಮರ್ಥಿಸಬೇಕೆಂದು ನಿರ್ದೇಶನವನ್ನು ನೀಡುವುದಕ್ಕೆ ಸಂಬಂಧಿಸಿದ ವಾರಂಟು, ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿರಬೇಕು ಹಾಗೂ ತಪ್ಪು ಅಫಿಡವಿಟ್ಟನ್ನು ಸಲ್ಲಿಸಿಲ್ಲವೆನ್ನುವುದನ್ನು ಖಚಿತಪಡಿಸಲು ಪ್ರಯತ್ನಿಸುವಂತಿರಬೇಕು.ಏಕೆಂದರೆ ಅಫಿಡವಿಟ್ಟು ತಪ್ಪಾಗಿದೆಯೆಂದು ಒಮ್ಮೆ ಕಂಡುಬಂದರೆ, ಅವನು ಕಾನೂನಿಗನುಸಾರವಾಗಿ ಪ್ರಾಸಿಕ್ಯೂಷನ್ ನಡೆಸಲು ಜವಾಬ್ದಾರನಾಗುವನು.ಇದರಿಂದಾಗಿ ಅವನು 156 ( 3) ನೇ ಪ್ರಕರಣದ ಮೇರೆಗೆ ಸಾಮಾನ್ಯವಾಗಿ ದಂಡಾಧಿಕಾರಿಯವರ ಅಧಿಕಾರವನ್ನು ಅವನು ಕೋರಲು ಅವನಿಗೆ ಅಡ್ಡಿಯುಂಟಾಗುತ್ತದೆ.ಅದನ್ನು ಹೊರತುಪಡಿಸಿದಂತೆ, ಪ್ರಕರಣದ ಆರೋಪಗಳ ಸ್ವರೂಪವನ್ನು ಪರಿಗಣಿಸಿ, ಇದರ ಸತ್ಯಾಸತ್ಯತೆಯನ್ನು ಮಾನ್ಯ ದಂಡಾಧಿಕಾರಿಯವರು ಸಹ ಪರಿಶೀಲಿಸಬಹುದಾಗಿದೆಯೆಂದು ನಾವು ಈಗಾಗಲೇ ತಿಳಿಸಿದ್ದೇವೆ.ಲಲಿತಾ ಕುಮಾರಿ ಮೊಕದ್ದಮೆಯಲ್ಲಿ ವಿವರಿಸಲಾದಂಥ ಆರ್ಥಿಕ ವಲಯ, ವೈವಾಹಿಕ ವಿವಾದ| ಕೌಟುಂಬಿಕ ವಿವಾದಗಳು, ವಾಣಿಜ್ಯಾತ್ಮಕ ಅಪರಾಧಗಳು, ವೈದ್ಯಕೀಯ ಉದಾಸೀನತೆ ಪ್ರಕರಣಗಳು ಭ್ರಷ್ಟಾಚಾರ ಪ್ರಕರಣಗಳು ಮತ್ತು ಕ್ರಿಮಿನಲ್ ಪ್ರಾಸಿಕ್ಯೂಷನನ್ನು ಪ್ರಾರಂಭಿಸುವಲ್ಲಿ ಆದ ಅಸಹಜ ವಿಳಂಬ/ಅಸಮರ್ಥನೀಯ ವಿಳಂಬ ಉಂಟಾಗುವ ಪ್ರಕರಣಗಳ ೦ ತಹ ಹಲವಾರು ಮೊಕದ್ದಮೆಗಳನ್ನು ದಾಖಲಿಸಲಾಗುತ್ತಿರುವುದರಿಂದ ನಾವು ಹಾಗೆ ಹೇಳುವುದು ಅನಿವಾರ್ಯವಾಗಿದೆ.ಅದಲ್ಲದೆ, ಮಾನ್ಯ ದಂಡಾಧಿಕಾರಿಯವರು, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಲ್ಲಿ ಆದ ವಿಳಂಬದ ಬಗ್ಗೆಯೂ ಕೂಡ ಅರಿವುಳ್ಳವರಾಗಿದ್ದಾರೆ.

5. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಶ್ರೀ ಎಂ.ಪಿ. ರೇಣುಕಾಚಾರ್ಯ ಹಾಗೂ ಇತರರು -ವಿರುದ್ಧ ಕರ್ನಾಟಕ ರಾಜ್ಯ ಹಾಗೂ ಮತ್ತೊಬ್ಬರು ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠದ ಆದೇಶದ ಪ್ರತಿಗಳನ್ನು ಹಾಗೂ ಶ್ರೀ ಅಬ್ದುಲ್ಲಾ ಎಂ ಹಾಗೂ ಇತರರು ವಿರುದ್ಧ ಬಿ.ಪಿ. ರಾಜೀವ್ಲೋಚನ್ ಮೊಕದ್ದಮೆಯಲ್ಲಿ ಮತ್ತೊಂದು ಸಮನ್ವಯ ಪೀಠದ ಮತ್ತೊಂದು ಆದೇಶದ ಛಾಯಾ ಪ್ರತಿಗಳನ್ನು ಮಂಡಿಸಿ, ಆ ಮೊಕದ್ದಮೆಗಳಲ್ಲಿ ಕೂಡ, ಈ ನ್ಯಾಯಾಲಯದ ಸಮನ್ವಯ ಪೀಠವು ಅಫಿಡವಿಟ್ ಜೊತೆಗಿರದ ದೂರನ್ನು ರದ್ದುಗೊಳಿಸಲು ತಕ್ಕುದಾಗಿರುತ್ತದೆ ಎಂದು ಸಮರ್ಪಕವಾಗಿ ನಿವೇದಿಸಿದ್ದಾರೆ.

6. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ನ್ಯಾಯಾಲಯದ ಗಮನವನ್ನು ಸೆಳೆದಿರುವ ಪ್ರಿಯಾಂಕ ಶ್ರೀವಾತ್ಸವ ಮೊಕದ್ದಮೆಯನ್ನು (ಮೇಲಿನ) ಅದರಲ್ಲೂ ನಿರ್ದಿಷ್ಟವಾಗಿ 29, 30 ಹಾಗೂ 31 ನೇ ಕಂಡಿಕೆಯನ್ನು ಎಚ್ಚರಿಕೆಯಿಂದ ಓದಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಗತ್ಯವಾಗಿ ದಂಡ ಪ್ರಕ್ರಿಯಾ ಸಂಹಿತೆಯ 154 ( 1) ಹಾಗೂ 154 ( 3) ಪ್ರಕರಣಗಳು, ಪೂರ್ವಭಾವಿಯಾಗಿ ಬರುವ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿರುವಂತಹ ವಿಷಯಗಳಲ್ಲಿ ಅಫಿಡವಿಟ್ಟು ದೂರಿನೊಂದಿಗೆ ಇರಲೇಬೇಕು ಎಂದು ಅಭಿಪ್ರಾಯ ಪಟ್ಟಿದೆಯೆಂಬುದನ್ನು ತೋರಿಸಲು ಹೊರಟಿದೆ.ಸದರಿ ಅಫಿಡಾವಿಟ್ಟು, ದೂರುದಾರನಿಗೆ ಪೂರಕ ಅಫಿಡವಿಟ್ಟಾಗಿರುತ್ತದೆ.ಇದರಿಂದ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿರಬೇಕು ಹಾಗೆಯೇ ಸುಳ್ಳು ಅಫಿಡವಿಟ್ಟನ್ನು ಸಲ್ಲಿಸಿಲ್ಲವೆಂಬುದನ್ನು ಖಚಿತಪಡಿಸಲು ಪ್ರಯತ್ನಿಸಬೇಕು.ಏಕೆಂದರೆ, ಒಮ್ಮೆ

ಅಫಿಡವಿಟ್ಟು ಸುಳ್ಳೆಂದು ಕಂಡುಬಂದರೆ, ಅವನು ಕಾನೂನಿಗನುಸಾರವಾಗಿ ಪ್ರಾಸಿಕ್ಯೂಷನ್ಗೆ ಅರ್ಹನಾಗುವನು.ಹಾಗೆ ಅಭಿಪ್ರಾಯಪಡುವ ಮೂಲಕ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಒಮ್ಮೆ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗೆ ಆದೇಶಿಸಿದರೆ, ತನಿಖಾ ಏಜೆನ್ಸಿಯು ನಡೆಸಿದ ತನಿಖಾ ಪ್ರಕ್ರಿಯೆಯನ್ನು ದೂರುದಾರನು ದುರ್ಬಳಕೆ ಮಾಡಿಕೊಂಡಿರುವುದಿಲ್ಲ ಅಥವಾ ತನಗೆ ಬೇಕಾದ ಹಾಗೆ ಅನುಕೂಲಕರವಾಗಿ ತೆಗೆದುಕೊಂಡಿರುವುದಿಲ್ಲವೆನ್ನುವ ಹಾಗೆ ದೂರನ್ನು ಒಳಗೊಂಡ ದೂರುದಾರನು ಸಲ್ಲಿಸಿದ ಅಫಿಡವಿಟ್ ಮೂಲಕ ಮಾತ್ರ ದೃಢಪಡಿಸಬಹುದಾದ ಅವನ ದೂರಿನಲ್ಲಿ ಅವನು ಮಾಡಲಾದ ದೂರುಗಳು/ಆಪಾದನೆಗಳ ಬಗ್ಗೆ ದೂರುದಾರನು ಗಂಭೀರವಾಗಿರುವನು ಎಂಬುದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಬೇಕು ಎಂಬುದನ್ನು ಸ್ಪಷ್ಟಪಡಿಸಿದೆ.

ಸದರಿ ತೀರ್ಪಿಗೆ ಹೆಚ್ಚಿನ ಗೌರವವನ್ನು ನೀಡುತ್ತಾ, ದೂರನ್ನು ಆಧರಿಸಿ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ಪೊಲೀಸು ತನಿಖೆಗೆ ಆದೇಶಿಸಿದ್ದ ಸಂದರ್ಭದಲ್ಲಿ ಮಾತ್ರ ಸದರಿ ತೀರ್ಪ ಅನ್ವಯವಾಗಿತ್ತೆಂದು ನಿವೇದಿಸಲಾಗಿದೆ.ಆದಾಗ್ಯೂ, ಮ್ಯಾಜಿಸ್ಟ್ರೇಟನು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ಯಾವುದೇ ತನಿಖೆಗಾಗಿ ವಿಷಯವನ್ನು ಉಲ್ಲೇಖಿಸದೆ ದೂರುದಾರನನ್ನು, ಅವನು ಸಲ್ಲಿಸಿದ ಸಾಕ್ಷಿಗಳನ್ನು ಹಾಗೆಯೇ ತಮ್ಮ ದೂರಿಗೆ ಪೂರಕವಾಗಿ ಅವರು ಗುರುತಿಸಿದ ನಿಶಾನೆಗಳನ್ನು ವಿಚಾರಣೆ ಮಾಡುವಲ್ಲಿ ಸ್ವತಃ ಮುಂದುವರೆದಿರುವ ಮತ್ತು ತದನಂತರ ಸಂಜ್ಞೇಯತೆಗೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಆದೇಶವನ್ನು ಮಾಡಲು ಮುಂದುವರೆದಿರುವ ಸಂದರ್ಭಗಳಲ್ಲಿ ಸದರಿ ತೀರ್ಪಿನಲ್ಲಿ ಆ ಎಲ್ಲಾ ಅಂಶವನ್ನು ಚರ್ಚಿಸಿಲ್ಲದಿರುವಂತೆ ಕಂಡುಬರುತ್ತದೆ.

ಸದ್ಯದ ಮೊಕದ್ದಮೆಯಲ್ಲಿ, ಈಗಾಗಲೇ, ಮೇಲೆ ಅಭಿಪ್ರಾಯಪಡಲಾದಂತೆ, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದ್ದ ದೂರು ಅಫಿಡವಿಟ್ಟನ್ನು ಒಳಗೊಂಡಿಲ್ಲದಿದ್ದರೂ, ದೂರುದಾರನು ಸ್ವತಃ ತಾನೇ ವಿಚಾರಣೆಗೊಳಗಾಗಿದ್ದು, ಪ್ರಾ.ಸಾ -2 ಎಂಬುವರ ಪರವಾಗಿ ಮತ್ತೊಬ್ಬ ಸಾಕ್ಷಿದಾರನನ್ನು ವಿಚಾರಣೆ ಮಾಡಲಾಗಿದ್ದು, ನಿಶಾನೆ ಸಿ 1, ಸಿ ( ಎ), ಸಿ 2 ಹಾಗೂ ಪಿ 2 ( ಎ) ಎಂದು ಗುರುತು ಮಾಡಲಾಗಿತ್ತೆಂಬ ಸಂಗತಿ ಹಾಗೆ ಉಳಿಯುತ್ತದೆ.ಇದಾದ ನಂತರ ಮಾತ್ರ, ಪ್ರತಿಜ್ಞಾ ಹೇಳಿಕೆಯ ಪ್ರಪತ್ರದಲ್ಲಿ ದೂರುದಾರನ ಸಾಕ್ಷ್ಯವನ್ನು ಮತ್ತು ದೂರುದಾರನ ಪರವಾಗಿ ವಿಚಾರಣೆಗೊಳಗಾದ ಪ್ರಾ.ಸಾ .2 ರ ಸಾಕ್ಷ್ಯವನ್ನು ವಿಶ್ಲೇಷಿಸಿದ ನಂತರ ಹಾಗೂ ನಿಶಾನೆಗಳೆಂದು ಗುರುತು ಮಾಡಿದ ದಸ್ತಾವೇಜುಗಳನ್ನು ಪರಿಶೀಲಿಸಿದ ನಂತರ ಅಧಿವಿಚಾರಣಾ ನ್ಯಾಯಾಲಯಕ್ಕೆ ದಾಖಲಾತಿ ಸಂ. III ರಲ್ಲಿ ಮೊಕದ್ದಮೆಯನ್ನು ದಾಖಲಿಸುವಲ್ಲಿ ಮತ್ತು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವಲ್ಲಿ ಮಹತ್ವ ಕಂಡು ಬಂದಿರುವುದಿಲ್ಲ.ಹಾಗೆಯೇ, ಪ್ರಶ್ನಿತ ಆದೇಶವನ್ನು ಹೊರಡಿಸಲು ಕ್ರಮ ಜರುಗಿಸಲಾಗಿದೆ.ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗೆ ವಿಷಯವನ್ನು ಉಲ್ಲೇಖಿಸುವ ಅಧಿವಿಚಾರಣಾ ನ್ಯಾಯಾಲಯದ ಪ್ರಶ್ನೆಯು ಪ್ರಸ್ತುತ ಮೊಕದ್ದಮೆಯಲ್ಲಿ ಉದ್ಭವಿಸಿಲ್ಲ.

7. ಆ ವಿಷಯದ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗೆ ಆದೇಶ ಇಲ್ಲದಿರುವುದರಿಂದ, ನನ್ನ ಅಭಿಪ್ರಾಯದಲ್ಲಿ, ದೂರಿನೊಂದಿಗೆ ಅಫಿಡವಿಟ್ಟನ್ನು ಸಲ್ಲಿಸದಿರುವ ಪ್ರಶ್ನೆಯು ದೂರಿನ ಪರಿಣಾಮವನ್ನು ಅಥವಾ ಅನವಶ್ಯಕ ದೂರನ್ನು ಮಾಡುವುದನ್ನು ಅಮಾನ್ಯಗೊಳಿಸುವುದಿಲ್ಲ.ಹಾಗೆಯೇ ಪ್ರಿಯಾಂಕ ಶ್ರೀವಾಸ್ತವ ರವರ ಮೊಕದ್ದಮೆಯ (ಮೇಲಿನ) ಹಿನ್ನೆಲೆಯಲ್ಲಿ

ದೂರಿನ ಜೊತೆಯಲ್ಲಿ ಅಫಿಡವಿಟ್ಟು ಇರುವುದು ಪ್ರಸ್ತುತ ಪ್ರಕರಣದಲ್ಲಿಯೂ ಕಡ್ಡಾಯವಾಗಿತ್ತು ಎಂಬ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವು ಅಂಗೀಕಾರಾರ್ಹವಾಗಿಲ್ಲ.

8. ಈ ನ್ಯಾಯಾಲಯದ ಸಮನ್ವಯ ಪೀಠವು, ಪ್ರಿಯಾಂಕ ಶ್ರೀವಾಸ್ತವ ರವರ ಮೊಕದ್ದಮೆಯನ್ನು ಪರಾಮರ್ಶಿಸಿದ ನಂತರ, ಎಂ.ಪಿ. ರೇಣುಕಾಚಾರ್ಯ ರವರ ಮೊಕದ್ದಮೆಯಲ್ಲಿ (ಮೇಲಿನ) ಪ್ರಥಮ ಮಾಹಿತಿ ವರದಿಯನ್ನು ಹಾಗೂ ಅದರ ಮುಂದೆ ಪ್ರಶ್ನಿಸಲಾದ ತತ್ಪರಿಣಾಮದ ವ್ಯವಹರಣೆಯನ್ನು ರದ್ದುಗೊಳಿಸಿದೆ.ಆದರೂ, ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಪ್ರಕ್ರಿಯೆಗೆ ಅನುಸಾರವಾಗಿ ತನ್ನ ದೂರನ್ನು ಮುಂದುವರಿಸಲು ದೂರುದಾರನಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿದೆ.ಸದರಿ ಮೊಕದ್ದಮೆಯಲ್ಲಿ, ಯಾವುದೇ ಅಫಿಡವಿಟ್ ಇಲ್ಲದಿರುವ, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ದೂರನ್ನು ಆಧರಿಸಿ, ಮ್ಯಾಜಿಸ್ಟ್ರೇಟರು,ದಿನಾಂಕ: 02.05.2014 ರ ತಮ್ಮ ಆದೇಶದ ಮೇರೆಗೆ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ, ಪೊಲೀಸು ಅಧೀಕ್ಷಕರು, ಲೋಕಾಯುಕ್ತ, ದಾವಣಗೆರೆ ಇವರಿಗೆ ತನಿಖೆ ನಡೆಸಲು ಸೂಚಿಸಿದ್ದರು ಎಂಬುದನ್ನು ಗಮನಿಸಬೇಕಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಬಿನ್ನಹ ಇಲ್ಲದಿದ್ದುದರಿಂದ ಬಹುಶಃ ಸಮನ್ವಯ ಪೀಠವು ಪ್ರಿಯಾಂಕ ಶ್ರೀವಾಸ್ತವ ರವರ ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಾಧೀಶರು ವಿಧಿಸಿದ ತತ್ವಗಳನ್ನು ಅನ್ವಯಿಸಿ, ಪ್ರಥಮ ಮಾಹಿತಿ ವರದಿಯನ್ನು ರದ್ದುಗೊಳಿಸುವ ಆದೇಶವನ್ನು ಹೊರಡಿಸಿದೆ.ನಮ್ಮ ಮುಂದಿರುವ ಪ್ರಸ್ತುತ ಮೊಕದ್ದಮೆಯು ತುಂಬಾ ವಿಭಿನ್ನವಾಗಿರುವುದರಿಂದ, ಪ್ರಸ್ತುತ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗಾಗಿ ದೂರನ್ನು ಉಲ್ಲೇಖಿಸದಿರುವುದರಿಂದ, ಎಂ.ಪಿ. ರೇಣುಕಾಚಾರ್ಯ ರವರ ಮೊಕದ್ದಮೆಯಲ್ಲಿ (ಮೇಲಿನ) ನೀಡಲಾದ ನಿರ್ಣಯವು ಪ್ರಸ್ತುತ ದೂರಿನ ಮೇಲೆ ಯಾವುದೇ ರೀತಿಯ ಪ್ರೇರೇಪಣೆ ಅಥವಾ ಪ್ರಭಾವವನ್ನು ಬೀರುತ್ತದೆಂದು ನನಗನ್ನಿಸುವುದಿಲ್ಲ.

ಅದೇ ರೀತಿ, ಎಂ. ಅಬ್ದುಲ್ಲಾರವರ ಮೊಕದ್ದಮೆಯಲ್ಲಿ (ಮೇಲಿನ) ಈ ನ್ಯಾಯಾಲಯದ ಮತ್ತೊಂದು ಸಮನ್ವಯ ಪೀಠವು ಪ್ರಿಯಾಂಕಾ ಶ್ರೀವಾಸ್ತವ ರವರ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ ನಂತರ ಖಾಸಗಿ ದೂರಿನಲ್ಲಿ ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ಸಂಜ್ಞೇಯತೆಯನ್ನು ರದ್ದುಗೊಳಿಸುವ ಮೂಲಕ ಅರ್ಜಿಯನ್ನು ಪುರಸ್ಕರಿಸಿದೆ.ಆದಾಗ್ಯೂ, ಸದರಿ ಎಂ. ಅಬ್ದುಲ್ಲಾರವರ ಮೊಕದ್ದಮೆಯಲ್ಲಿ (ಮೇಲಿನ) ಹೊರಡಿಸಿದ ಆದೇಶದ ಛಾಯಾ ಪ್ರತಿಯ ಅವಗಾಹನೆಯಿಂದ, ಸದರಿ ಮೊಕದ್ದಮೆಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ಯಾವುದೇ ತನಿಖೆಯನ್ನು ಆದೇಶಿಸಲಾಗಿತ್ತೇ ಎಂಬ ಬಗ್ಗೆ ಇದರಿಂದ ಸ್ಪಷ್ಟವಾಗುವುದಿಲ್ಲವಾದ್ದರಿಂದ, ಸದರಿ ಸದರಿ ಎಂ. ಅಬ್ದುಲ್ಲಾ ರವರ ಮೊಕದ್ದಮೆಯು (ಮೇಲಿನ) ನಮ್ಮ ಮುಂದಿರುವ ಪ್ರಸ್ತುತ ಮೊಕದ್ದಮೆಯ ಪ್ರಕರಣದ ಸನ್ನಿವೇಶಗಳಿಗೆ ಸಾದೃಶವಾಗಿತ್ತೆಂದು ಅಭಿಪ್ರಾಯಪಡಲು ಸಾಧ್ಯವಿಲ್ಲ.ಹಾಗೆಯೇ ಸದರಿ ತೀರ್ಪು ಕೂಡ, ಪ್ರಸ್ತುತ ಅರ್ಜಿದಾರರ ಪ್ರಯೋಜನಕ್ಕೆ ಬರುವುದಿಲ್ಲ.

9. ತತ್ಪರಿಣಾಮವಾಗಿ, ನಾನು, ಅಧಿವಿಚಾರಣಾ ನ್ಯಾಯಾಲಯವು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡು, ರಿಜಿಸ್ಟರ್ ಸಂ. III ರಲ್ಲಿ ಮೊಕದ್ದಮೆಯನ್ನು ನೋಂದಾಯಿಸುವುದಕ್ಕಾಗಿ ಆದೇಶ ಮಾಡಿರುವುದರಿಂದ, ಆಪಾದಿತ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಮೇಲು ನೋಟಕ್ಕೆ ಯಾವುದೇ ಸಾಕ್ಷ್ಯಾಧಾರ ಇದೆಯೆಂದು ಸ್ವತಃ ಮನದಟ್ಟು ಮಾಡಿಕೊಂಡ ನಂತರ ಮಾತ್ರ, ಅದರಲ್ಲೂ

ದೂರುದಾರನು ನೀಡಿದ ಪ್ರತಿಜ್ಞಾ ಹೇಳಿಕೆ ಹಾಗೂ ಪ್ರಾ.ಸಾ .2 ನೀಡಿದ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ, ಹಾಗೆಯೇ ನಿಶಾನೆ ಸಿ, ಸಿ 1 (   ಎ), ಸಿ 2 ಹಾಗೂ ಪಿ 2 (   ಎ) ಗುರುತುಮಾಡಿದ ದಸ್ತಾವೇಜುಗಳನ್ನು ಅವಗಾಹಿಸಿದ ನಂತರ, ಇದರಲ್ಲಿ ಯಾವುದೇ ಅಕ್ರಮತೆ ಅಥವಾ ಕಾನೂನು ಬಾಹಿರತೆ ಕಂಡುಬಂದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.ಹಾಗೆಯೇ, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಂಡಿಸಿದ ವಾದದ ಆಧಾರವೊಂದನ್ನೇ ಪುರಸ್ಕರಿಸಲಾಗುವುದಿಲ್ಲ.ತತ್ಪರಿಣಾಮವಾಗಿ, ಈ ಅರ್ಜಿಯನ್ನು ಪುರಸ್ಕರಿಸುವ ಯಾವುದೇ ಗುಣಾರ್ಹತೆ ಇದೆಯೆಂದು ನನಗೆ ಕಂಡುಬಂದಿರುವುದಿಲ್ಲ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕ್ರಿಮಿನಲ್ ಅರ್ಜಿಯನ್ನು ವಜಾಗೊಳಿಸಿದೆ.